KARNATAK UNIVERSITY, DHARWAD
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
Examination G.A.D. Section
ಪರೀಕ್ಷಾ ಸಾಮಾನ್ಯ ಆಡಳಿತ ವಿಭಾಗ
"NAAC Accredited with "A" Grade 2022"

Pavate Nagar, Dharwad
ಪಾವಟೆನಗರ, ಧಾರವಾಡ

Tel Ph No. 0836-2215267
Website : www.kud.ac.in

ನಂ:/ಕವಿವಿ/ಪರೀಕ್ಷಾ/ಜಿಎಡಿ/2025/ 739 ದಿನಾಂಕ: 17/12/2025

# ಸುತ್ತೋಲೆ

**ವಿಷಯ:** ಜನೇವರಿ 2026 ರಲ್ಲಿ ಜರಗುವ ಸ್ನಾತಕ NEP/Revised NEP ಪದವಿಯ 1, 3, 5 ಮತ್ತು 7 ನೇ ಸೆಮಿಸ್ಟರ್‌ನ (ರೆಗ್ಯೂಲರ್/ರಿಪೀಟರ್) ವಿದ್ಯಾರ್ಥಿಗಳ ವಿಷಯವಾರು ಅಂಕಿ ಸಂಖ್ಯೆಗಳ ಮಾಹಿತಿಯನ್ನು ತಂತ್ರಾಂಶದಲ್ಲಿ ಅಳವಡಿಸುವ ಕುರಿತು.

**ಉಲ್ಲೇಖ:** 1) ಅಧಿಸೂಚನೆಗಳ ನಂ:/ಕವಿವಿ/ಪರೀಕ್ಷಾ/ಜಿಎಡಿ/2025/644, 645 & 646 ದಿನಾಂಕ:26/11/2025
2) ಸುತ್ತೋಲೆ ಸಂಖ್ಯೆ:ಕವಿವಿ/ಪರೀಕ್ಷಾ/ಜಿಎಡಿ/2025/681, ದಿನಾಂಕ:08/12/2025
3) ಸುತ್ತೋಲೆ ಸಂಖ್ಯೆ:ಕವಿವಿ/ಪರೀಕ್ಷಾ/ಜಿಎಡಿ/2025/705, ದಿನಾಂಕ:10/12/2025

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ಜನೇವರಿ 2026 ರಲ್ಲಿ ಜರುಗುವ ಎಲ್ಲ ಸ್ನಾತಕ NEP/Revised NEP ಪದವಿಗಳ 1, 3, 5 ಮತ್ತು 7 ನೇ ಸೆಮಿಸ್ಟರ್‌ನ ರೆಗ್ಯೂಲರ್/ರಿಪೀಟರ್ ಪರೀಕ್ಷೆಗಳಿಗೆ ಸಂಬಂಧಿಸಿದಂತೆ, ಪರೀಕ್ಷಾ ಅರ್ಜಿ/ಶುಲ್ಕ ತುಂಬಲು ಉಲ್ಲೇಖದ ಅಧಿಸೂಚನೆಗಳು ಹಾಗೂ ಸುತ್ತೋಲೆಗಳ ಮೂಲಕ ಅವಕಾಶ ನೀಡಲಾಗಿತ್ತು. ಪ್ರಸ್ತುತ ಪರೀಕ್ಷಾ ಅರ್ಜಿ ತುಂಬುವ ಕೊನೆಯ ದಿನಾಂಕ ಮುಕ್ತಾಯಗೊಂಡಿರುತ್ತದೆ. ಸದರಿ ಪರೀಕ್ಷೆಗಳನ್ನು ಜರುಗಿಸಲು ವಿಷಯವಾರು ವಿದ್ಯಾರ್ಥಿಗಳ ಅಂಕಿ ಸಂಖ್ಯೆಗಳ ಮಾಹಿತಿಯು ಅವಶ್ಯಕವಾಗಿರುತ್ತದೆ.

ಆದುದರಿಂದ, ಕಡ್ಡಾಯವಾಗಿ ಆಯಾ ಮಹಾವಿದ್ಯಾಲಯದವರೆ ಎಲ್ಲ ಸ್ನಾತಕ NEP/Revised NEP ಪದವಿಗಳ 1, 3, 5 ಮತ್ತು 7 ನೇ ಸೆಮಿಸ್ಟರ್‌ನ ರೆಗ್ಯೂಲರ್/ರಿಪೀಟರ್ ಪರೀಕ್ಷೆಗಳ ವಿಷಯವಾರು ವಿದ್ಯಾರ್ಥಿಗಳ ಅಂಕಿ ಸಂಖ್ಯೆಗಳ ಮಾಹಿತಿಯನ್ನು ಈ ಕೆಳಕಾಣಿಸಿದ Weblink ದಲ್ಲಿ ನಮೂದಿಸುವುದು ಹಾಗೂ ಮತ್ತೊಮ್ಮೆ ಪರಿಶೀಲಿಸಿ ಖಚಿತಪಡಿಸಿಕೊಳ್ಳುವುದು. ಮುಂದುವರೆದು, ತಾವು ಕಳುಹಿಸಿದ ವಿದ್ಯಾರ್ಥಿಗಳ ವಿಷಯವಾರು ಅಂಕಿ ಸಂಖ್ಯೆಗಳ ಆಧಾರದ ಮೇಲೆ ಪ್ರಶ್ನೆ ಪತ್ರಿಕೆಗಳನ್ನು ವಿತರಿಸಲಾಗುತ್ತದೆ. ಕಾರಣ, ಸದರ ಮಾಹಿತಿಯನ್ನು Weblink ದಲ್ಲಿ **ದಿನಾಂಕ:19/12/2025** ರ ಒಳಗಾಗಿ ಕಡ್ಡಾಯವಾಗಿ ನಮೂದಿಸಲು ಸೂಚಿಸಲಾಗಿದೆ. ಅದೆ ರೀತಿ, ವಿದ್ಯಾರ್ಥಿಗಳ ವಿಷಯವಾರು ಅಂಕಿ ಸಂಖ್ಯೆಗಳ ಸರಿಯಾದ ಮಾಹಿತಿಯನ್ನು ನೀಡದೆ ಇದ್ದಲ್ಲಿ ಸಂಬಂಧಿಸಿದ ಮಹಾವಿದ್ಯಾಲಯದ ಪ್ರಾಚಾರ್ಯರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು ಹಾಗೂ E-Mail ಮುಖಾಂತರ ಅಥವಾ Whatsapp ನಲ್ಲಿ ಸಲ್ಲಿಸಿದ ಮಾಹಿತಿಯನ್ನು ಪರಿಗಣಿಸಲಾಗುವುದಿಲ್ಲ.

1) Weblink: https://kudqp.aargees.org/
2) User Name: UG-uucms Collegecode (UG- ಎಂದು ಟೈಪ್ ಮಾಡಿ ಮುಂದೆ ತಮ್ಮ ಕಾಲೇಜಿನ ಕೋಡ ಟೈಪ್ ಮಾಡಿ)
3) Password: uucms Collegecode (ಪಾಸವರ್ಡ ತಮ್ಮ ಕಾಲೇಜಿನ ಕೋಡ್ ಆಗಿರುತ್ತದೆ)

17/12

ಕುಲಸಚಿವರು(ಮೌಲ್ಯಮಾಪನ)

ಗೆ,

ಕರ್ನಾಟಕ ವಿಶ್ವವಿದ್ಯಾಲಯ ವ್ಯಾಪ್ತಿಯ ಎಲ್ಲ ಸಂಲಗ್ನ ಹಾಗೂ ಅಧೀನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳು.

**ಪ್ರತಿ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ:**

1) ಸಿಸ್ಟಮ್ ಎನಾಲಿಸ್ಟ, ಗಣಕಯಂತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
2) ನಿರ್ದೇಶಕರು ಮಾಹಿತಿ ತಂತ್ರಜ್ಞಾನ ವಿಭಾಗ ಕ.ವಿ.ವಿ. ಧಾರವಾಡ. (ಅಂತರ್ಜಾಲದಲ್ಲಿ ಪ್ರಕಟಿಸುವುದು)
3) ಕುಲಪತಿಗಳ, ಕುಲಸಚಿವರ, ಕುಲಸಚಿವರು(ಮೌಲ್ಯಮಾಪನ), ವಿತ್ತಾಧಿಕಾರಿಗಳು ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ ಧಾರವಾಡ.
4) ಉಪಕುಲಸಚಿವರು / ಸಹಾಯಕ ಕುಲಸಚಿವರು, ಪರೀಕ್ಷಾ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
5) ಎಲ್ಲ ಅಧೀಕ್ಷಕರುಗಳಿಗೆ, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.